# ಸೂಚಕ ಪ್ರಭೇದಗಳು
# (Sentinel Species)



**ಇತ್ತೀಚೆಗೆ ಸುದ್ದಿಯಲ್ಲಿದೆ:**

- ಜಾಗತಿಕ ಹವಾಮಾನ ಬದಲಾವಣೆಯಿಂದಾಗಿ ಸಮುದ್ರದ ಮಂಜುಗಡ್ಡೆಗಳು ಕರಗುತ್ತಿರುವುದರಿಂದ, **'ಚಕ್ರವರ್ತಿ ಪೆಂಗ್ವಿನ್'** ಪ್ರಭೇದವನ್ನು IUCN ತನ್ನ ಕೆಂಪು ಪಟ್ಟಿಯಲ್ಲಿ 'ಅಪಾಯದ ಅಂಚಿನಲ್ಲಿರುವ ಪ್ರಭೇದ' (NT) ವರ್ಗದಿಂದ, **'ಅಳಿವಿನಂಚಿನಲ್ಲಿರುವ ಪ್ರಭೇದ' (En)** ವರ್ಗಕ್ಕೆ ಸೇರಿಸಲಾಗಿದೆ.
- ಚಕ್ರವರ್ತಿ ಪೆಂಗ್ವಿನ್ ಒಂದು **'ಸೂಚಕ ಪ್ರಭೇದ'**ವಾಗಿರುವುದರಿಂದ, ಇವುಗಳ ಸಂಖ್ಯೆಯಲ್ಲಿನ ಕುಸಿತವು ಒಟ್ಟಾರೆ **'ಅಂಟಾರ್ಕ್ಟಿಕ್ ಪರಿಸರ ವ್ಯವಸ್ಥೆಯ'** ಮೇಲಿರುವ ತೀವ್ರ ಒತ್ತಡವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. 2080ರ ದಶಕದ ವೇಳೆಗೆ ಇವುಗಳ ಸಂತತಿ ಅರ್ಧದಷ್ಟು ಕಡಿಮೆಯಾಗುವ ಆತಂಕವಿದೆ ಎಂದು

## ಸೂಚಕ ಪ್ರಭೇದಗಳ (Sentinel Species) ಬಗ್ಗೆ:

- ಇದು ಒಂದು **ನಿರ್ದಿಷ್ಟ ಸಸ್ಯ ಅಥವಾ ಪ್ರಾಣಿಯ ಪ್ರಭೇದ**ವಾಗಿದ್ದು, ಇದರ ಆರೋಗ್ಯದ ಸ್ಥಿತಿಯು ಇದು ವಾಸಿಸುವ ಪರಿಸರ ವ್ಯವಸ್ಥೆಯ ಒಟ್ಟಾರೆ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.
- ಪರಿಸರದಲ್ಲಿ ಉಂಟಾಗುವ ಮಾಲಿನ್ಯ, ರೋಗಗಳು ಹಾಗೂ ಹವಾಮಾನ ಬದಲಾವಣೆಯಂತಹ ಪರಿಸರದ ಒತ್ತಡಗಳಿಗೆ ಇವು ಬಹಳ ವೇಗವಾಗಿ ಮತ್ತು ಸ್ಪಷ್ಟವಾಗಿ ಸ್ಪಂದಿಸುತ್ತವೆ.
- **ಪರಿಸರದಲ್ಲಿನ ಅಸಮತೋಲನವು** ವ್ಯಾಪಕವಾಗಿ ಹರಡುವ ಮುನ್ನವೇ ಅದನ್ನು ಪತ್ತೆಹಚ್ಚಲು, ಇವು ನಮಗೆ **'ಮುನ್ಸೂಚನಾ ವ್ಯವಸ್ಥೆಗಳಂತೆ'** ಕಾರ್ಯನಿರ್ವಹಿಸುತ್ತವೆ.

## ಅಂತರರಾಷ್ಟ್ರೀಯ ಪರಿಸರ ಸಂರಕ್ಷಣೆ ಒಕ್ಕೂಟ (IUCN)ದ ಬಗ್ಗೆ:

**ಸ್ಥಾಪನೆ:** 1948 ರಲ್ಲಿ.

**ಪ್ರಧಾನ ಕಚೇರಿ:** ಸ್ವಿಟ್ಜರ್ಲೆಂಡ್‌ನ **'ಗ್ಲಾಂಡ್'**.

**ಪ್ರಮುಖ ಉದ್ದೇಶ:** ಪರಿಸರ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರವನ್ನು ಉತ್ತೇಜಿಸುವುದು ಮತ್ತು ಸಂರಕ್ಷಣಾ ಕಾರ್ಯಗಳಿಗೆ ಅಗತ್ಯವಿರುವ ವೈಜ್ಞಾನಿಕ ಜ್ಞಾನ ಹಾಗೂ ತಾಂತ್ರಿಕ ಬೆಂಬಲವನ್ನು ಒದಗಿಸುವುದು.

**IUCN ಕೆಂಪು ಪಟ್ಟಿ:** ಪ್ರಪಂಚದಾದ್ಯಂತ ಅಪಾಯದಲ್ಲಿರುವ **ಪ್ರಭೇದಗಳ ಸಂರಕ್ಷಣೆಗಾಗಿ,** ಈ ಸಂಸ್ಥೆಯು 1964ರಲ್ಲಿ **'ಅಪಾಯದಲ್ಲಿರುವ ಪ್ರಭೇದಗಳ ಕೆಂಪು ಪಟ್ಟಿ'**ಯನ್ನು ಬಿಡುಗಡೆ ಮಾಡಲು ಪ್ರಾರಂಭಿಸಿತು.

## IUCN ಕೆಂಪು ಪಟ್ಟಿಯ ಪ್ರಮುಖ ಅಂಶಗಳು:

- ಇದು IUCN ಸಂಗ್ರಹಿಸಿದ ಪಟ್ಟಿಯಾಗಿದ್ದು, ಇದು ಸಸ್ಯಗಳು, ಪ್ರಾಣಿಗಳು ಮತ್ತು ಶಿಲೀಂಧ್ರ ಪ್ರಭೇದಗಳ ಸಂರಕ್ಷಣಾ ಸ್ಥಿತಿಗತಿಗಳ ಕುರಿತಾದ ಪ್ರಪಂಚದ ಅತ್ಯಂತ ಅಧಿಕೃತ ಹಾಗೂ ಸಮಗ್ರವಾದ ಮಾಹಿತಿಯನ್ನು ಒಳಗೊಂಡಿದೆ.
- ಪಟ್ಟಿಯಲ್ಲಿರುವ ಪ್ರಭೇದಗಳು: ಪ್ರಸ್ತುತ ಈ ಕೆಂಪು ಪಟ್ಟಿಯಲ್ಲಿ ಒಟ್ಟು 1,43,000 ಕ್ಕೂ ಹೆಚ್ಚು ಪ್ರಭೇದಗಳನ್ನು ಮೌಲ್ಯಮಾಪನ ಮಾಡಿ ಪಟ್ಟಿಮಾಡಲಾಗಿದೆ.
- **ಭಾರತ ಸದಸ್ಯತ್ವ ಪಡೆದುಕೊಂಡಿದೆ:** ಭಾರತ ದೇಶವು 1969 ರಲ್ಲಿ IUCN ನ ಅಧಿಕೃತ ಸದಸ್ಯತ್ವವನ್ನು ಪಡೆಯಿತು.
- IUCN ಕೆಂಪು ಪಟ್ಟಿಯಲ್ಲಿ ಪ್ರಭೇದಗಳ ವರ್ಗೀಕರಣ: ಯಾವುದೇ ಪ್ರಭೇದವು ಅಳಿವಿನ ಅಂಚಿಗೆ ಎಷ್ಟು ಹತ್ತಿರದಲ್ಲಿದೆ ಎನ್ನುವ ಸಂರಕ್ಷಣಾ ಸ್ಥಿತಿಯ ಆಧಾರದ ಮೇಲೆ, IUCN ಪ್ರಭೇದಗಳನ್ನು ಪ್ರಮುಖವಾಗಿ ಈ ಮುಂದಿನಂತೆ ವರ್ಗೀಕರಿಸುತ್ತದೆ:

## ಸೂಚಕ ಪ್ರಭೇದಗಳಿಗೆ ಪ್ರಮುಖ ಉದಾಹರಣೆಗಳು:



1. **ಉಭಯವಾಸಿಗಳು (ಕಪ್ಪೆಗಳು):** ಕಪ್ಪೆಗಳು ಪಾರದರ್ಶಕ ಅಥವಾ ರಂಧ್ರಗಳನ್ನು ಹೊಂದಿರುವ ತೆಳುವಾದ ಚರ್ಮವನ್ನು ಹೊಂದಿರುತ್ತವೆ. ಇದರಿಂದಾಗಿ ಅವು ನೀರು ಮತ್ತು ಪರಿಸರದಲ್ಲಿನ ಮಾಲಿನ್ಯಕಾರಕ ಹಾಗೂ ರೋಗಕಾರಕಗಳಿಗೆ ಹೆಚ್ಚು ಸೂಕ್ಷ್ಮವಾಗಿ ಸ್ಪಂದಿಸುತ್ತವೆ.



2. **ಕಲ್ಲಿದ್ದಲು ಗಣಿಗಳಲ್ಲಿನ ಕ್ಯಾನರಿ ಹಕ್ಕಿಗಳು:** ಹಿಂದಿನ ಕಾಲದಲ್ಲಿ, ಕಲ್ಲಿದ್ದಲು ಗಣಿಗಳಲ್ಲಿ 'ಕಾರ್ಬನ್ ಮೊನಾಕ್ಸೈಡ್'ನಂತಹ ವಿಷಾನಿಲಗಳು ಸೋರಿಕೆಯಾಗುವುದನ್ನು ಪತ್ತೆಹಚ್ಚಲು ಈ ಹಕ್ಕಿಗಳನ್ನು ಬಳಸಲಾಗುತ್ತಿತ್ತು. ಇವು ಮನುಷ್ಯರಿಗಿಂತ ಅತಿ ವೇಗದ ಚಯಾಪಚಯ ಕ್ರಿಯೆಯನ್ನು ಹೊಂದಿರುವುದರಿಂದ, ವಿಷಾನಿಲದ ಪ್ರಭಾವಕ್ಕೆ ಮನುಷ್ಯರಿಗಿಂತ ಮೊದಲೇ ಎಚ್ಚರಿಕೆ ನೀಡುತ್ತಿದ್ದವು.



3. **ಜೇನುನೊಣಗಳು:** ಕೃಷಿಯಲ್ಲಿ ಬಳಕೆಯಾಗುವ ರಾಸಾಯನಿಕ ಮತ್ತು ಕೀಟನಾಶಕಗಳ ಅತಿಯಾದ ಬಳಕೆಯ ಪ್ರಮಾಣವನ್ನು ಅರಿಯಲು ಜೇನುನೊಣಗಳನ್ನು ಬಳಸಲಾಗುತ್ತದೆ. ಜೇನುನೊಣಗಳ ಸಂಖ್ಯೆಯಲ್ಲಿ ಇಳಿಕೆಯು ಪರಿಸರದ ಅಸಮತೋಲನದ ಏರುಪೇರು ಮತ್ತು ಪರಾಗಸ್ಪರ್ಶ ಬಿಕ್ಕಟ್ಟನ್ನು ಸೂಚಿಸುತ್ತದೆ.



4. **ಹಿಮಕರಡಿಗಳು:** ಇವು **ಆರ್ಕ್ಟಿಕ್ ಪ್ರದೇಶದ** ಪರಿಸರ ವ್ಯವಸ್ಥೆಯ ಆರೋಗ್ಯವನ್ನು ಹಾಗೂ ಅಲ್ಲಿ ಮಾಲಿನ್ಯಕಾರಕಗಳು ಶೇಖರಣೆಯಾಗುತ್ತಿರುವುದನ್ನು ಸೂಚಿಸುವ ಪ್ರಮುಖ ಜೀವಿಗಳಾಗಿವೆ. ಜಾಗತಿಕ ತಾಪಮಾನ ಏರಿಕೆ ಹಾಗೂ ಮಂಜುಗಡ್ಡೆ ಕರಗುವಿಕೆಯಿಂದ ಆಗುತ್ತಿರುವ ಭೀಕರ ಪರಿಣಾಮಗಳನ್ನು ಇವು ಸ್ಪಷ್ಟವಾಗಿ ತೋರುತ್ತವೆ.

## IUCN ಪ್ರಕಾರ ಪ್ರಬೇಧಗಳ ವರ್ಗೀಕರಣ

| | |
|---|---|
| EX | 1. ಅಳಿದುಹೋದ (Extinct-EX): ಭೂಮಿಯ ಮೇಲೆ ಸಂಪೂರ್ಣ ಸಂತತಿ ನಾಶ. |
| EW | 2. ಕಾಡಿನಲ್ಲಿ ಅಳಿದುಹೋದ (Extinct in the Wild - EW): ಕೇವಲ ಮೃಗಾಲಯ ಅಥವಾ ಕೃತಕ ವ್ಯವಸ್ಥೆಯಲ್ಲಿ ಮಾತ್ರ ಉಳಿದುಕೊಂಡಾಗ. |
| CR | 3. ತೀವ್ರವಾಗಿ ಅಳಿವಿನಂಚಿನಲ್ಲಿರುವ (Critically Endangered - CR) |
| EN | 4. ಅಳಿವಿನಂಚಿನಲ್ಲಿರುವ (Endangered - EN) |
| VU | 5. ದುರ್ಬಲವಾಗಿರುವ ಅಥವಾ ಅಪಾಯಕ್ಕೆ ಸಿಲುಕುವ ಸಾಧ್ಯತೆಯಿರುವ (Vulnerable - VU) |
| NT | 6. ಅಪಾಯದ ಅಂಚಿನಲ್ಲಿರುವ (Near Threatened - NT) |
| LC | 7. ಕಡಿಮೆ ಕಾಳಜಿಯ (Least Concern - LC) |
| DD | 8. ದತ್ತಾಂಶ ಕೊರತೆಯಿರುವ (Data Deficient - DD) |
| NE | 9. ಮೌಲ್ಯಮಾಪನ ಮಾಡದ (Not Evaluated - NE) |